ಅಸಲು ದಾವಾ ನಂ.64/2019

ಡಿ ಡಬ್ಲ್ಯೂ: 2

(ಸಾಕ್ಷಿಯನ್ನು ಈ ದಿನ ದಿನಾಂಕ.29.07.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಃ ಶ್ರೀ ಆರ್ ಆಯ್ ಎಮ್ ವಕೀಲರಿಂದಃ

1. ನಾನು ಕೋರವಾರ ಗ್ರಾಮದ ನಿವಾಸಿ. ಪ್ರತಿವಾದಿ ನನ್ನ ಸ್ನೇಹೀತ ಇರುತ್ತಾರೆ. ಸದರಿಯವರು 4 ಜನ ಅಣ್ಣ ತಮ್ಮಂದಿರು ಅವರೆಂದರೆ ಅಯ್ಯಪ್ಪ, ಬಸವರಾಜ ಮತ್ತು ಈರಣ್ಣ ಮತ್ತೊಬ್ಬ ಸಹೋದರ ಹೆಸರು ನನಗೆ ಗೊತ್ತಿಲ್ಲ ಮತ್ತು ಪರಿಚಯ ಇಲ್ಲ. ಎಲ್ಲಾ ಸಹೋದರರು ಪ್ರತೇಕವಾಗಿ ವಾಸ ಮಾಡುತ್ತಿದ್ದಾರೆ. ಹಾಗಾದರೆ ತಮ್ಮ ಜಮೀನುಗಳನ್ನು ಹಂಚಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗೆ ಸರ್ವೇ ನಂಬರ 282/3 ಕ್ಷೇತ್ರ 3 ಎಕರೆ 5 ಗುಂಟೆ ಜಮೀನು ಬಂದಿರುತ್ತದೆ. ಪ್ರತಿವಾದಿ ಗೋವಾದಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ಆತ ದುಡಿಮೆ ಮಾಡಲು ಹೋಗಿ ಬಂದು ಮಾಡುತ್ತಾರೆ ಎಂದು ನುಡಿದಿರುತ್ತಾರೆ.

2. ಖರೀದಿ ವ್ಯವಹಾರ ನಡೆದಾಗ ತಾವು ಇದ್ದೀರಾ ಎಂದರೆ ಸಾಕ್ಷಿ ಇದ್ದೆ ಎಂದು ನುಡಿದಿರುತ್ತಾರೆ. ಖರೀದಿ ಕರಾರು ಪತ್ರ ಆಗುವ ಸಂದರ್ಭದಲ್ಲಿ ಸಿಂದಗಿಗೆ ಬಂದಿರುತ್ತೀರಾ ಎಂದರೆ ಸಾಕ್ಷಿ ಬಂದಿರುತ್ತೇನೆ ಎಂದು ನುಡಿದಿರುತ್ತಾರೆ. ಖರೀದಿ ಕರಾರು ಪತ್ರ ಆಗುವ ನಾನು ಇದ್ದೆ ಎಂದು ನುಡಿದಿರುತ್ತಾರೆ. ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಗೆ ಸೇರಿದ್ದು ಎನ್ನಲಾದ ಜಮೀನಿನ ಪಹಣಿ ಪತ್ರಿಕೆ ನೋಡಿರುತ್ತೀರಾ ಎಂದರೆ ಸಾಕ್ಷಿ ಉತಾರೆಯಲ್ಲಿ ಯಾರು ಹೆಸರು ಇರುತ್ತದೆ ಎಂದರೆ ಸಾಕ್ಷಿ ನಾನು ನೋಡಿದ್ದು ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ.

3. ಪ್ರತಿವಾದಿ ತನ್ನ ಹೊಲವನ್ನು ಮಾರಾಟ ಮಾಡಲು ತೆಗೆದಿದ್ದು ಅದಕ್ಕೆ ವಾದಿ ಹೊಲವನ್ನು ಖರಿದಿಸಲು ಇಚ್ಚೆ ವ್ಯಕ್ತ ಪಡಿಸಿರುತ್ತಾರೆ ಎಂದರೆ ಸಾಕ್ಷಿ 1 ಲಕ್ಷ 25 ಸಾವಿರ ಹಣಕ್ಕೆ ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಇಡು ಪತ್ರ ಎಂದು ನುಡಿದಿರುತ್ತಾರೆ.

4. ನಾನು ಪಿ ಯು ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಖರೀದಿ ಕರಾರು ಪತ್ರ ಬರೆದುಕೊಂಡು ಹಾಜರಿದ್ದೀರಾ ಎಂದರೆ ಸಾಕ್ಷಿ ಹಾಜರಿದ್ದೆ ಎಂದು ನುಡಿದಿರುತ್ತಾರೆ. ಖರೀದಿ ಕರಾರು ಪತ್ರ ಬರೆಯುವಾಗ ಇದನ್ನು ಕೇವಲ ಇಡಿಗಾಗಿ ಬರೆದುಕೊಡಲಾಗುತ್ತದೆ ಎಂದು ನಮೂದಿಸಿದ್ದು ತಮ್ಮ ಗಮನಕ್ಕೆ ಬಂದಿರುತ್ತದೆಯೇ ಎಂದರೆ ಸಾಕ್ಷಿ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಕರಾರು ಪತ್ರದ ಅಂಶಗಳನ್ನು ತಮಗೆ ಓದಿ ಹೇಳಿರುತ್ತಾರಯೇ ಎಂದರೆ ಸಾಕ್ಷಿ ನಾವೇ ಮುಂದೆ ಕುಳಿತು ಬರೆಸಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಪ್ರತಿವಾದಿ ತನ್ನ ಜಮೀನು ವಾದಿಗೆ 1 ಲಕ್ಷ 25 ಸಾವಿರ ಹಣ ಮಾರಾಟ ಮಾಡಲು ಒಪ್ಪಿದಂತೆ 1 ಲಕ್ಷ ರೂಪಾಯಿ ಮುಂಗಡ ಪಡೆದು ಖರೀದಿ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ನಂತರ ಉಳಿದ 25 ಸಾವಿರ ಹಣವನ್ನು ಪಡೆದು ಕರೆದಾಗ ಖರೀದಿ ಪತ್ರವನ್ನು ಮಾಡಿಕೊಡುವದಾಗಿ ಪ್ರತಿವಾದಿ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರ ಮಾಡಿಕೊಂಡ ನಂತರ ಪ್ರತಿವಾದಿ ಗೋವಾಗೆ ಹೋದವರು ಮರಳಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

6. ದಾವಾ ಆಸ್ತಿ ಜಮೀನು ಒಣ ಬೇಸಾಯ ಇರುತ್ತದೆ. ಖರೀದಿ ಕರಾರು ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ದಾವಾ ಜಮೀನಿನ ಮೌಲ್ಯ 1 ಲಕ್ಷ 25 ಸಾವಿರ ಇತ್ತು ಎಂದರೆ 1 ಎಕರೆಗೆ ಸಾಕ್ಷಿ 3 ಲಕ್ಷ 50 ಸಾವಿರ ಇತ್ತು ಎಂದು ನುಡಿದಿರುತ್ತಾರೆ. ನನಗೆ ಕನ್ನಡ ಓದಲು ಬರುತ್ತದೆ. ಅಯ್ಯಪ್ಪ ಗುರಪ್ಪ ಕುಂಬಾರ ಪ್ರತಿವಾದಿ ಸಹೋದರ ಎಂದರೆ ಸರಿ. ನಿಪಿ3 ರಂತೆ ಪ್ರತಿವಾದಿ ಸಹೋದರ ಅಯ್ಯಪ್ಪ ಗುರಪ್ಪ ಕುಂಬರ ಸರ್ವೇ ನಂಬರ 282/2 ಒಟ್ಟು 8 ಎಕರೆ 18 ಗುಂಟೆ ಯಲ್ಲಿ 3 ಎಕರೆ 5 ಗುಂಟೆ ಜಮೀನನ್ನು ಶಿವಪುತ್ರಯ್ಯ ಕರ್ಪೂರಮಠರವರಿಗೆ 1,12,500/–ಹಣಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿಯವರು ತಮ್ಮ ಜಮೀನಿನ್ನು ಅದರ ಮೌಲ್ಯಕ್ಕಿಂತ ಕಡಿಮೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

7. ಮಾರಾಟ ಮಾಡುವ ಸಂದರ್ಭದಲ್ಲಿ ಜಮೀನಿನ ಮೌಲ್ಯ 1,12,500 ಇದ್ದ ಕಾರಣ ಪ್ರತಿವಾದಿ ಸಹೋದರ ಅಷ್ಟೆ ಮೊತ್ತಕ್ಕೆ ಹೊಲವನ್ನು ಮಾರಾಟ ಮಾಡಿದ್ದು ಅದರಂತೆ ಪ್ರತಿವಾದಿ 1,25,000/– ರೂಪಾಯಿಗೆ ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸುಳ್ಳು ಇದ್ದು ದಾವಾ ಜಮೀನಿನ ಮೌಲ್ಯ 3 ಲಕ್ಷ 50 ಸಾವಿರ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಶಪಥ ಪತ್ರದಲ್ಲಿರುವ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.